## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

**C.C. No.645/2019**

CW-12
PW-೯

ಸಾಕ್ಷಿದಾರರ ಹೆಸರು : ಯಂಕಮ್ಮ
ಗಂಡನ ಹೆಸರು : ಹನುಮಂತರಾಯ
ವಯಸ್ಸು : ೫೦ ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ ಸ್ಥಳ : ಬ್ಯಾಗವಾಡ.

ದಿನಾಂಕ 19.03.2024 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1 ರಿಂದ 11, 13 ರಿಂದ 19 ಗೊತ್ತಿಲ್ಲ. ಸುಮಾರು 5 ವರ್ಷಗಳ ಹಿಂದೆ ನೀರ ಮಾನವಿ ಯಿಂದ ಸರಕಾರಿ ಬಸ್ ನಲ್ಲಿ ರಾಯಚೂರಿಗೆ ಹೋಗುತ್ತಿರುವಾಗ ಬೆಳೆಗ್ಗೆ 11-00 ಗಂಟೆ ಸುಮಾರಿಗೆ, ಕಪಗಲ್ ಕ್ರಾಸ್ ಹತ್ತಿರ ಅಪಘಾತ ಆಗಿರುತ್ತದೆ. ಅದರಿಂದ ನಾನು ಕೆಳಗೆ ಬಿದ್ದು ತಲೆ, ಬೆನ್ನಿಗೆ ಹಾಗೂ ಇತರ ಕಡೆ ಗಾಯಗಳಾಗಿರುತ್ತವೆ. ಗಾಯಗೊಂಡ ನಮ್ಮನ್ನು ಚಿಕಿತ್ಸೆ ಸಲುವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಸಹಾಯಕ ಸರಕಾರಿ ವಕೀಲರು ಸಾಕ್ಷಿಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಕೋರಿದ್ದರಿಂದ ಅವಕಾಶ ನೀಡಿಲಾಯಿತು)

**ಪಾಟೀ ಸವಾಲುಃ ಸ.ಸ.ಅ. ರವರಿಂದ ಃ**

ದಿನಾಂಕಃ11-07-2019 ರಂದು ಈ ಪ್ರಕರಣದ ಆರೋಪಿ ಬಸ್ ನಂ.ಕೆಎ-35-ಎಫ್-303 ನೇದ್ದನ್ನು ಅತಿವೇಗ ಮತ್ತು ಆಲಕ್ಷ್ಯತನದಿಂದ ರಸ್ತೆಯ ಬಲಗಡೆಗೆ ಚಲಾಯಿಸಿ ಚಾಸಾ-4 ರ ಕಾರಿಗೆ ಡಿಕ್ಕಿ ಪಡಿಸಿ

ಬಸ್ಸನ್ನು ಪಲ್ಟಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅದರಿಂದ ಬಸ್ಸಿನಲ್ಲಿ ಇದ್ದ ನನಗೆ ಮತ್ತು ಇತರರಿಗೆ ಸದಾ ಮತ್ತು ಭಾರಿ ಪ್ರಮಾಣದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಅಪಘಾತವು ಬಸ್ಸಿನ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಬಗ್ಗೆ ಈಗಾ ಓದಿ ಹೇಳಿದಂತೆ ದಿನಾಂಕಃ12-07-2019 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ನಿಪಿ-9 ಎಂದು ಗುರುತಿಸಲಾಯಿತು. ನಾನು ನಿಪಿ-9 ರಂತೆ ಹೇಳಿಕೆ ನೀಡಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

ಪ್ರ.ಧರ್ಜೆ. ನ್ಯಾ.ದಂ. ಮಾನವಿ.